(ಇಂದು ದಿನಾಂಕ:06-03-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ಶ್ರೀ ವಿ ಬಿ ಆರ್ ವಕೀಲರಿಂದ:**

1. ನನ್ನ ಮದುವೆ 2006 ರಲ್ಲಿ ನಾನು ಅಲ್ಪವಯಿ ಇದ್ದಾಗ ಆಗಿರುತ್ತದೆ. ನನ್ನ ತಂದೆ ದೇವಣ್ಣ ಇವರಿಗೆ ವೆಂಕಮ್ಮ, ವೇಂಕಟೇಶ, ರೇಖಮ್ಮ, ಯಮನೂರು, ವೀರೇಶ ಮತ್ತು ನರಸಮ್ಮ ಎಂದು ಆರು ಜನ ಮಕ್ಕಳು ಇರುತ್ತಾರೆ. ಚೌಡಮ್ಮ ಇವರು ಸಿಂಧನೂರಿನ 7 ನೇ ವಾರ್ಡ್ ಜನತಾ ಬಜಾರನಲ್ಲಿ ತಮ್ಮ ಸ್ವಂತ ಮನೆಯಲ್ಲಿ ಇರುತ್ತಾರೆ. ಸದರಿ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಜಮೀನು ಮಾರಿ ಸದರಿ ಮನೆ 2005-06 ರಲ್ಲಿ ಕಟ್ಟಲಾಗಿದೆ.

2. ಖರೀದಿ ಪತ್ರ ಆದ 16 ವರ್ಷಗಳ ನಂತರ ನಾನು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನ ಮದುವೆ 2006 ರಲ್ಲಿ ಆಗಿರುತ್ತದೆ, ಆ ಸಮಯದಲ್ಲಿ ನಮ್ಮ ಮನೆಯ ಆರ್ಥಿಕ ಪರಿಸ್ಥಿತಿ ಸರಿ ಇರಲಿಲ್ಲ ಎಂದರೆ ಸರಿ. ದಾವಾ ಜಮೀನು ಸವಳು ಭೂಮಿ, ಚೆನ್ನಾಗಿ ಬೆಳೆ ಬೆಳೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. 2005 ರಲ್ಲಿ ಆಸ್ತಿ ಭಾಗಶಃ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿ. ಸಾಕ್ಷಿ ಪುನಃ ಹೇಳುವುದೇನೆಂದರೆ ಆ ವೇಳೆಯಲ್ಲಿ ನಾನು ಬಾಲಕಿಯಾಗಿದ್ದೆ ಎಂದು ನುಡಿಯುತ್ತಾರೆ. 2005 ರಲ್ಲಿ ನನ್ನ ವಯಸ್ಸು 16-17 ಇತ್ತು. ನಿಪಿ-5 ಮತ್ತು 6 ಖರೀದಿ ಪತ್ರಗಳ ಮೇಲೆ ನನ್ನ ತಾಯಿ ಮತ್ತು ನನ್ನ ಅಣ್ಣ ವೆಂಕಟೇಶ ಸಮ್ಮತಿ ಸಾಕ್ಷಿ ಸಹಿ ಮಾಡಿರುತ್ತಾರೆ. ವೆಂಕಟೇಶ, ಯಮನೂರು ಮತ್ತು ವೀರೇಶ ಎಲ್ಲರೂ ಸಮ್ಮತಿ ಸಾಕ್ಷಿ ಸಹಿ ಮಾಡಿದ್ದರು ವೆಂಕಟೇಶ ಒಬ್ಬರೇ ಸಹಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. 2008 ರಲ್ಲಿ ನಾನು ವಯಸ್ಕಳಾದೆ ಮತ್ತು ನಾನು 20 ವರ್ಷ ವಯಸ್ಕಳಾದಾಗ ಪೂರ್ಣ ಪ್ರಮಾಣದಲ್ಲಿ ಆಸ್ತಿ ಮಾರಾಟದ ಬಗ್ಗೆ ನನಗೆ ಮಾಹಿತಿ ಗೊತ್ತಾಯಿತು. ವೆಂಕಪ್ಪರವರಿಗೆ ರಾಮಣ್ಣ, ರಾಧಾಮ್ಮ ಮತ್ತು ಇನ್ನೊಬ್ಬರ ಹೆಸರು ಗೊತ್ತಿಲ್ಲ ಹೀಗೆ ಒಟ್ಟು ಮೂರು ಜನ

ಮಕ್ಕಳು ಇದ್ದರು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಇನ್ನೊಬ್ಬ ತಾತನ ಮಕ್ಕಳ ಹೆಸರು ನನಗೆ ಗೊತ್ತಿಲ್ಲ.

(ಪ್ರತಿವಾದಿ ಪರ ವಕೀಲರು ಶ್ರೀ ವಿಬಿಆರ್ ವಕೀಲರು ಅವಶ್ಯಕ ಪಕ್ಷಗಾರರ ಬಗ್ಗೆ ಪ್ರಶ್ನೆ ಕೇಳುತ್ತಿದ್ದು ಅದರ ಬಗ್ಗೆ ಯಾವುದೇ ವಿವಾದಾಂಶ ರಚನೆ ಆಗದೇ ಇದ್ದ ಕಾರಣ ಸದರಿ ಪ್ರಶ್ನೆ ಕೇಳಲು ಬರುವುದಿಲ್ಲ ಅಂತಾ ವಕೀಲರಿಗೆ ಸೂಚಿಸಲಾಯಿತು).

4. ದಾವಾ ಆಸ್ತಿ ರಾಧಮ್ಮನ ಸ್ವಂತ ಆಸ್ತಿ. ರಾಧಮ್ಮ ಇವರಿಗೆ ಮದುವೆ ಆಗಿದ್ದಿಲ್ಲ ಕಾರಣ ಅವರ ಆಸ್ತಿಯನ್ನು ಮೊಮ್ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯನ್ನು ಕೊಟ್ಟಿರುತ್ತಾರೆ. ರಾಧಮ್ಮರವರ ಆಸ್ತಿ ಅವರ ಮೊಮ್ಮಕ್ಕಳಿಗೆ ವರ್ಗಾವಣೆ ಆದ ಬಗ್ಗೆ ನಾನು ದಾಖಲೆಗಳನ್ನು ಸಲ್ಲಿಸಿದ್ದೇನೆ. ರಾಧಮ್ಮರವರ ಆಸ್ತಿ ಅವರ ಮೊಮ್ಮಕ್ಕಳಿಗೆ ವರ್ಗಾವಣೆ ಆದ ಬಗ್ಗೆ ನಾನು ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೊಮ್ಮಕ್ಕಳು ರಾಧಮ್ಮರವರ ಗಂಡು ಮಗನ ಮಕ್ಕಳು ಎಂದು ನುಡಿಯುತ್ತಾರೆ. ಅವರೆಂದರೆ ನನ್ನ ತಾಯಿ ಮತ್ತು ನನ್ನ ದೊಡ್ಡಪ್ಪರವರು. ನಾನು ರಾಧಮ್ಮನ ಕುಟುಂಬಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

5. ಪ್ರತಿವಾದಿ ಸಂಖ್ಯೆ 7 ಇವರು 2003 ರಲ್ಲಿ ಪ್ರತಿವಾದಿ ನಂ.8 ರವರ ಪರ ಆಸ್ತಿ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿರಲಿಲ್ಲ. ನಾನು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇದೆ. ಪ್ರತಿವಾದಿ ಸಂಖ್ಯೆ 7 ಇವರು ಪ್ರತಿವಾದಿ ನಂ.9 ರವರ ಪರ ಆಸ್ತಿ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿರಲಿಲ್ಲ. ನಾನು 2008 ರಲ್ಲಿ ವಯಸ್ಕಳಾದ ನಂತರ ನನಗೆ ಪ್ರತಿವಾದಿ ಸಂಖ್ಯೆ 7 ಇವರು ಪ್ರತಿವಾದಿ ನಂ.9 ರವರ ಪರ ಆಸ್ತಿ ಮಾರಾಟ ಮಾಡಿದ ಬಗ್ಗೆ ಗೊತ್ತಾಯಿತು.

6. ನಿಪಿ-16 ಖಾಸ್ರಾ ಪಹಣಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-15 ವರ್ಗಾವಣೆ ಪತ್ರದ ಮುಖಾಂತರ ಆಸ್ತಿ ನನ್ನ ತಂದೆಯವರಿಗೆ ಬಂದಿರುತ್ತದೆ. ಸದರಿ ದಾಖಲೆಯಲ್ಲಿ ದಾವಾ ಆಸ್ತಿ ಮಾತ್ರ ಇತ್ತು. ನಾನು ಯಾವುದೇ ದಾಖಲೆಗಳನ್ನು ಪರೀಶೀಲಿಸದೇ ಸಾಕ್ಷಿ ನುಡಿಯುತ್ತಿದ್ದು, ನನಗೆ ದಾಖಲೆಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ

ಎಂದರೆ ಸರಿಯಲ್ಲ. ನಾನು ನಿಪಿ-17 ಮರಣ ಪ್ರಮಾಣ ಪತ್ರ ಝುರಾಕ್ಸ್ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿ. ನಿಪಿ-17 ಮರಣ ಪ್ರಮಾಣ ಪತ್ರದಲ್ಲಿ ಅರ್ಜಿ ಕೊಟ್ಟ ವ್ಯಕ್ತಿ ಹೆಸರು ಇಲ್ಲ, ಅರ್ಜಿಯನ್ನು ದೃಡಿಸೀಕರಿಸಿ ಕೊಟ್ಟ ಅಧಿಕಾರಿಯ ಹೆಸರು ಮತ್ತು ಪದನಾಮ ಇಲ್ಲ ಎಂದರೆ, ಅವರು ಏನು ಕೊಟ್ಟಿರುತ್ತಾರೆ ಅದನ್ನೇ ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ನಿಪಿ-17 ಮರಣ ಪ್ರಮಾಣ ಪತ್ರ ಖೊಟ್ಟಿ ದಾಖಲೆಯನ್ನು ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-17 ಮರಣ ಪ್ರಮಾಣ ಪತ್ರ ಖೊಟ್ಟಿ ದಾಖಲೆ ಆಗಿದ್ದ ಕಾರಣ ಅದರಲ್ಲಿ ತಾಯಿಯ ಹೆಸರನ್ನು ಗುರುತಿಸಲಾಗಿದೆ ಎಂದರೆ ಸರಿಯಲ್ಲ. ಈಗ ನಿಪಿ-17 ಮರಣ ಪ್ರಮಾಣ ಪತ್ರದ ದೃಢೀಕರಿಸಿದ ನಕಲನ್ನು ನ್ಯಾಯಾಲಯಕ್ಕೆ ನಾನು ಸಲ್ಲಿಸುತ್ತೇನೆ. ನಿಪಿ-17 ಖೊಟ್ಟಿ ಮರಣ ಪ್ರಮಾಣ ಪತ್ರದ ಆಧಾರದ ಮೇಲೆ ಆಸ್ತಿ ವರ್ಗಾವಣೆ ಆಗಿದೆ ಎಂದರೆ ಸರಿಯಲ್ಲ. ಖೊಟ್ಟಿ ದಾಖಲೆ ಆದ ಕಾರಣ ನಿಪಿ-15 ಮ್ಯೂಟೇಶನ್ ವರ್ಗಾವಣೆ ದಾಖಲೆಯಲ್ಲಿ ರಾಧಮ್ಮರವರ ಮರಣದ ದಿನಾಂಕ ಬರೆದಿಲ್ಲ ಎಂದರೆ ಸರಿಯಲ್ಲ.

7. ನಾನು ರಾಧಮ್ಮರವರ ವಂಶವೃಕ್ಷವನ್ನು ಹಾಜರಪಡಿಸಿಲ್ಲ. ನನಗೂ ಮತ್ತು ರಾಧಮ್ಮರವರ ಮಧ್ಯೆ ಯಾವುದೇ ಸಂಬಂಧ ಇಲ್ಲ, ಆದರೂ ನಾನು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ರಿಂದ 13, 15 ಮತ್ತು 16 ದಾಖಲೆಗಳ ಮೇಲೆ ಅರ್ಜಿದಾರರ ಹೆಸರು ಮತ್ತು ಅವುಗಳನ್ನು ಕೊಟ್ಟ ಅಧಿಕಾರಿಯ ಹೆಸರು ಮತ್ತು ಪದನಾಮ ಇಲ್ಲ ಕಾರಣ ಅವುಗಳು ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ.

8. ನಿಪಿ-1 ರಿಂದ 9 ದಾಖಲೆಗಳ ಮೇಲೆ ಅರ್ಜಿದಾರರ ಹೆಸರು ಇದೆ ಎಂದರೆ ಸರಿ. ಅವುಗಳ ಮೇಲೆ ರವೀಂದ್ರ ಎನ್ನುವ ನ್ಯಾಯವಾದಿಯ ಹೆಸರು ಇದೆ ಎಂದರೆ ಇರಬಹುದು. ರಾಧಮ್ಮ ಯಾವಾಗ ಮರಣ ಹೊಂದಿರುತ್ತಾರೆ ನನಗೆ ಗೊತ್ತಿಲ್ಲ. ನಾನು ನಿಪಿ-17 ಖೊಟ್ಟಿ ದಾಖಲೆ ಸೃಷ್ಟಿಸಿದ್ದರಿಂದ ರಾಧಮ್ಮ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ವೆಂಕಟೇಶ ಮತ್ತು ಯಮನೂರ ಕೂಲಿ ಕೆಲಸ ಮಾಡುತ್ತಾರೆ.

9. ರೇಖಮ್ಮ ಮತ್ತು ವೆಂಕಮ್ಮ ಇವರಿಗೆ ಮದುವೆ ಆಗಿರುತ್ತದೆ. ರೇಖಮ್ಮ ನನಗಿಂತಲೂ 7 ವರ್ಷ ದೊಡ್ಡವಳು. ವೆಂಕಮ್ಮ ನನಗಿಂತಲೂ 10-15 ವರ್ಷ ದೊಡ್ಡವಳಿರುತ್ತಾಳೆ. ರೇಖಮ್ಮ ಮದುವೆ ವೇಳೆಯಲ್ಲಿ ಅಲ್ಪವಯಿ ಆಗಿದ್ದಳು. ಸಾಕ್ಷಿ ಪುನಃ ಹೇಳುವುದೇನೆಂದರೆ ರೇಖಮ್ಮ ಮದುವೆ ವೇಳೆಯಲ್ಲಿ ಅಲ್ಪವಯಿ ಆಗಿರಲಿಲ್ಲ. 2004 ರಲ್ಲಿ ರೇಖಮ್ಮ ಮತ್ತು ವೆಂಕಟೇಶ ಇವರ ಮದುವೆ ಆಗಿತ್ತು. ಅದಾದ 2 ವರ್ಷದಲ್ಲಿ ನನ್ನ ಮದುವೆ ಅಂದರೆ 2006 ರಲ್ಲಿ ಆಗಿರುತ್ತದೆ. ವೆಂಕಮ್ಮರವರ ಮದುವೆ ಆದ ವರ್ಷ ನನಗೆ ಗೊತ್ತಿಲ್ಲ. ನಾನೇ ಕೊನೆ ಮಗಳು. ಪ್ರತಿವಾದಿ ನಂ. 3 ಮತ್ತು 4 ರವರ ಮದುವೆ 2015 ರಲ್ಲಿ ಆಗಿರುತ್ತದೆ. ಅವರ ಮದುವೆಯಲ್ಲಿ ನಾನು ಹಾಜರಾಗಿದ್ದೆ. ಚೌಡಮ್ಮ, ವೆಂಕಟೇಶ ಮತ್ತು ಯಮನೂರು ಎಲ್ಲರೂ ಕೂಲಿ ಕೆಲಸ ಮಾಡುತ್ತಾರೆ.

10. ನನ್ನ ತಂದೆಯವರಿಗೆ ದಾವಾ ಆಸ್ತಿ ಹೊರತುಪಡಿಸಿ ಬೇರೆ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ರಾಧಮ್ಮನ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿ ರಾಧಮ್ಮನ ಸ್ವಂತ ಆಸ್ತಿ ಇದ್ದರೂ ಕೂಡಾ ನಾನು ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಆಸ್ತಿಗಳನ್ನು ವರ್ಗಾವಣೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದೇವಣ್ಣ ನಾಯಕ ಇವರು 1995 ರಲ್ಲಿ ಮರಣ ಹೊಂದಿರುತ್ತಾರೆ. ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಚೌಡಮ್ಮನ ಕುಟುಂಬಕ್ಕೆ ಆರ್ಥಿಕ ತೊಂದರೆ ಇದುದ್ದರಿಂದ ಅವರ ಮಕ್ಕಳ ಮದುವೆ ಮಾಡಲು ಅವರು ದಾವಾ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಭತ್ತ ಬೆಳೆಯಲಾಗಿದೆ. ದಾವಾ ಆಸ್ತಿಯಲ್ಲಿ ಕಲ್ಮನೆ ಖಾಜಾಬೀರವರು ಅವರು ಖರೀದಿ ಮಾಡಿದ ದಿನದಿಂದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಪ್ರತಿವಾದಿ ನಂ 8 ರವರು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ತದನಂತರ ಪ್ರತಿವಾದಿ ನಂ.10 ರವರು ಖರೀದಿ ಮಾಡಿದ್ದಾಗಿನಿಂದ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ.

11. ತದನಂತರ ಪ್ರತಿವಾದಿ ನಂ.7 ರವರು ಪ್ರತಿವಾದಿ ನಂ.9 ರವರಿಗೆ ಮಾರಾಟ ಮಾಡಿರುತ್ತಾರೆ, ಅಂದಿನಿಂದ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಅಗಷ್ಟ್ 2005 ರಲ್ಲಿ ತದನಂತರ ಪ್ರತಿವಾದಿ ನಂ.11 ಖರೀದಿ ಮಾಡಿರುತ್ತಾರೆ, ಅಂದಿನಿಂದ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. 2005 ರಿಂದ ಪ್ರತಿವಾದಿ ನಂ. 1 ರಿಂದ 12 ರವರು ಜಮೀನು ಖರೀದಿ ಮಾಡಿದ್ದಾಗಿನಿಂದ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. 2005 ರಿಂದ ಪ್ರತಿವಾದಿ ನಂ. 10 ರಿಂದ 12 ರವರು ದಾವಾ ಆಸ್ತಿಯಲ್ಲಿ ರೈಸ್‌ಮಿಲ್ ನಿರ್ಮಾಣ ಮಾಡಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸಾವಿತ್ರಮ್ಮರವರು ತಮ್ಮ ಮಗನ ಪರ ದಾನಪತ್ರ ಬರೆದುಕೊಟ್ಟಾಗಿನಿಂದ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಆ ಕಾರಣಕ್ಕಾಗಿ ನಾನು ಜಂಟಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಚೌಡಮ್ಮನ ಕುಟುಂಬಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

12. 02-04-2015 ರಂದು ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ನನಗೆ 2008 ರಲ್ಲಿ ಮೇಲೆ ಹೇಳಿದ ಮಾರಾಟದ ಬಗ್ಗೆ ಗೊತ್ತಾಯಿತು. ನನಗೆ 2008 ರಲ್ಲಿ ಮೇಲೆ ಹೇಳಿದ ಮಾರಾಟದ ಬಗ್ಗೆ ಗೊತ್ತಾದರೂ ಕೂಡಾ ನಾನು 7 ವರ್ಷಗಳ ನಂತರ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಪ್ರತಿವಾದಿ ನಂ. 1 ರಿಂದ 6 ರವರಿಗೆ ನಾನು ಸಂಬಂಧಪಟ್ಟಿಲ್ಲ ಕಾರಣ ಅವರು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿಯಲ್ಲ. ದಾವೆ ಚಾಲ್ತಿ ಬಗ್ಗೆ 1 ರಿಂದ 6 ರವರಿಗೆ ಗೊತ್ತಿದೆ. ಪ್ರತಿವಾದಿ ನಂ. 1 ರಿಂದ 6 ರವರಿಗೆ ನಾನು ಸಂಬಂಧಪಟ್ಟಿಲ್ಲ ಆ ಕಾರಣಕ್ಕಾಗಿಯೇ ನಾನು ಅವರನ್ನು ಜೊತೆಗೂಡಿಸಿ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು 18 ವರ್ಷಗಳಿಂದ ಗೊನವಾರ ಗ್ರಾಮದಲ್ಲಿ ಇದ್ದೇನೆ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು